ಸಾಕ್ಷಿಯನ್ನು ದಿ: 18.06.2025 ರಂದು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು. ಡಿ.ಡಬ್ಲ್ಯೂ-1

<u>ಪಾಟೀಸವಾಲುಃ- ವಾದಿ ಪರ ಶ್ರೀ ಆ ರ್ ಪಿ ವಕೀಲರಿಂದ ಃ-</u>

1. ನಾನು ಎಂ ಎ , ಬಿ.ಎಡ್ ವರೆಗೆ ಓದಿರುತ್ತೇನೆ. ವಾದಿಗಳು ನನ್ನ ದೊಡ್ಡಪ್ಪನ ಪತ್ನಿ ಮತುತ ಮಕ್ಕಳಾಗಿರುತ್ತಾರೆ. ನನ್ನ ತಂದೆ 1 ನೆ ಪ್ರತಿವಾದಿ ನಾಗರಾಜು ನನ್ನ ತಾತನ ಕೊನೆಯ ಮಗ. ನನ್ನ ತಂದೆಗೆ ಇಬ್ಬರು ಸಹೋದರ . 2 ನೆ ಪ್ರತಿವಾದಿ ಮತ್ತು ಕೆಂಪೆಗೌಡ , ಹಾಗೂ ಒಬ್ಬ ಸಹೋದರಿ ಅವರ ಹೆಸರು ಹೊನ್ನಮ್ಮ. ಸದರಿಯವರನ್ನು ದಾವೆಯಲ್ಲಿ ಪಕ್ಷಗಾರರಾಗಿ ಮಾಡಿರುವುದಿಲ್ಲ. ವಾದಿಯು ಶಾಶ್ವತ ನಿರ್ಬಂಧಕಾಜ್ಞೆ ಕೋರಿ ದಾವೆ ಸಲ್ಲಿಸಿರುತ್ತಾರೆ. ಈ

ದಾವ ಸ್ವತ್ತನ್ನು ಖಾತೆ ನಂ 69, ಸ್ವತ್ತಿನ ಸಂಖ್ಯೆ 89/2 ಮತ್ತು 89/2 ಎ ಮೇಲೆ ದಾವೆ ಹಾಕಿರುತ್ತಾರೆ. ನಿಡಿ 1 ರಂತೆ 89/2, 89/2 ಎ ವಾದಿಗಳ ತಂದೆ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ವಾದಿಯ ತಂದೆಗೆ ಗಂಡು ಮಕ್ಕಳಿರುವುದಿಲ್ಲ ಮತ್ತು 1 ರಿಂದ 3 ವಾದಿಯರು ಹೆಣ್ಣು ಗಳಿರುತ್ತಾರೆ ಎಂದರೆ ಸರಿ. ವಾದಿಯ ತಂದೆ ದಾವಾ ಸಲ್ಲಿಸಿದ 6-7 ವರ್ಷದ ನಂತರ ಮರಣಹೊಂದಿರುತ್ತಾರೆ. ನಿಡಿ 1 ರ ಪ್ರಕಾರ ಸ್ವತ್ತಿನ ಆಸ್ತಿಯನ್ನು ನಾವು ಖಾತೆ ಮಾಡಿಸಿಕೊಳ್ಳಲು ಹೋದ ಸಂದರ್ಭದಲ್ಲಿ ವಾದಿಗಳು ಗ್ರಾಮ ಪಂಚಾಯಿತಿಗೆ ತಕರಾರು ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಅದಕ್ಕೆ ಸಂಬಂಧಿಸಿದಂತೆ ಗ್ರಾಮ ಪಂಚಾಯಿತಿ ಪಿಡಿಒ ಅಧಿಕಾರಿಗಳು ನಿಪಿ 9 ರಂತೆ ವಾದಿಗೆ ನೋಟಿಸು ಜಾರಿ ಮಾಡಿರುತ್ತಾರೆ ಎಂದರೆ ಸರಿ. ನಾನು ಪ್ರಮಾಣಪತ್ರದಲ್ಲಿ ಹೇಳಿದ ಹಾಗೆ ದಾವೆ ಸ್ವತ್ತಿಗೆ ಸಂಬಂಧಿಸಿದಂತೆ ಪಂಚಾಯಿತಿಗೆ ಕರೆದಿದ್ದೆವು ಎಂದರೆ ಸಾಕ್ಷಿಯು ವಾದಿಗಳು ನಮಗೆ ಲೀಗಲ್ ನೋಟಿಸು ಜಾರಿಮಾಡಿದ ಮೇಲೆ ಪಂಚಾಯಿತಿಗೆ ಸೇರಿದೆವು ಎಂದು ನುಡಿಯುತ್ತಾರೆ. ವಾದಿಯು ದಾವಾ ಸಲ್ಲಿಸುವ ಮುನ್ನ ಲೀಗಲ್ ನೋಟಿಸು ಜಾರಿ ಮಾಡಿರುತ್ತಾರೆ. ನಿಪಿ 2 ರಂತೆ ವಾದಿ ತಂದೆ ವೃದ್ಧರಾದ ಕಾರಣ ಯಾವುದೇ ದಾಖಲಾತಿ ಸೃಷ್ಟಿ ಮಾಡಬಾರದು ಎಂದು ಪಂಚಾಯಿತಿ ಅಧಿಕಾರಿಗಳಿಗೆ ಮತ್ತು 1 ನೆ ಪ್ರತಿವಾದಿಗೆ ನೋಟಿಸು ಜಾರಿ ಮಾಡಿರುತ್ತೇವೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಇಲ್ಲಿವರೆಗೆ ಯಾವುದೆ ದಾಖಲಾತಿ ಸೃಷ್ಟಿಸಿಲ್ಲ ಎಂದು ಹೇಳುತ್ತಾರೆ.

2. 1 ನೇ ಪ್ರತಿವಾದಿ ದಾವೆ ಸಲ್ಲಿಸಿದ ನಂತರ ಮರಣಹೊಂದಿರುತ್ತಾರೆ. ಪಂಚಾಯಿತಿಗೆ ಯಾವ ಉದ್ದೇಶಕ್ಕೆ ಸೇರಿದೆವು ಎಂದರೆ ಸಾಕ್ಷಿಯು ನಾವು ಬೆಂಗಳೂರಲ್ಲಿ ವಾಸವಿದ್ದು ದಾವ ಷೆಡ್ಯೂಲನ್ನು ವಾದಿಗೆ ಬಿಟ್ಟುಕೊಡಲು ತಯಾರಿದ್ದು ವಾದಿಯು ಬರದೆ ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದು ಹೇಳುತ್ತಾರೆ. ನನ್ನ ಪ್ರಮಾಣಪತ್ರ ಪುಟ 8 ರಲ್ಲಿ ವಾದಿಗಳಿಗೆ ಯಾವುದೇ ರೀತಿಯಿಂದ ದಾವಾ ಸ್ವತ್ತು ಸ್ವಾಧೀನದಿಂದ ಹೊರಗೆ ಹಾಕಿರುವುದಿಲ್ಲ ಎಂದು ಬರೆದಿರುತ್ತೇನೆ ಎಂದರೆ ಸರಿ. ವಾದಿಯ ಸ್ವತ್ತನ್ನು ದುರುದ್ದೇಶದಿಂದ ಪಡೆಯಲು ಖಾತ ಬದಲಾವಣೆಗೆ ಪ್ರಯತ್ನಪಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಿಡಿ6 ದಾವೆ ಸಲ್ಲಿಸಿದ ನಂತರ ಪಡೆದುಕೊಂಡು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ ನಿಡಿ 2 , ರಿಂದ 5

ದಾವಾ ಸಲ್ಲಿಸಿದ ನಂತರ ಪಡೆದುಕೊಂಡ ದಾಖಲಾತಿ ಎಂದರೆ ಸರಿಯಲ್ಲ. ವಿದ್ಯುತ್ ಬಿಲ್ಲಿಗೆ ಸಂಬಂಧಿಸಿದಂತೆ ನಮ್ಮ ಹೆಸರಿನಲ್ಲಿ ಇರುವ ಮೂಲದಾಖಲಾತಿಗಳನ್ನು ಹಾಜರುಪಡಿಸಿಲ್ಲ. ವಿದ್ಯುತ್ ಬಿಲ್ಲುಗಳು ಈ ದಾವೆಗೆ ಸಂಬಂಧಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನಿಡಿ 14 ರಿಂದ 16 ಫೊಟೋ ಹಾಜರುಪಡಿಸಿದ್ದು ಅದರಲ್ಲಿ ನಾವು ಸ್ವಾಧೀನ ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಈ ಪ್ರಕರಣ ಇರುವ ಕಾರಣ ಬೇರೆ ಕಡೆ ಮನೆ ಕಟ್ಟಿಸಿಕೊಂಡು ವಾಸ ಇದ್ದೇವೆ ಎಂದು ಹೇಳುತ್ತಾರೆ.

<u>ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.</u>

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

1 ನೇ ಅಪರ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ
ಮಳವಳ್ಳಿ.